


**ದೇವರ ಕುದುರೆ**
(ಕಥಾಸಂಕಲನ)
ಲೇ: ಎಸ್. ಗಂಗಾಧರಯ್ಯ
ಪು: 120 ಬೆ: ₹ 100
ಪ್ರ: ಬಿಸಿಲ ಕೋಲು
ಪ್ರಕಾಶನ: 'ನವಿಲು',
ನಂ 250,
9ನೇ ಮುಖ್ಯರಸ್ತೆ
ಕಂಚಘಟ್ಟ ಎಕ್ಸ್‌ಟೆನ್ಶನ್
ತಿಪಟೂರು – 572201

ಗಂಗಾಧರಯ್ಯನವರು ವಾಸ್ತವ ಮತ್ತು ಭ್ರಾಮಕಗಳನ್ನು ಸರಿಯಾದ ಹದದಲ್ಲಿ ಹೆಣೆದಿದ್ದಾರೆ. ಆದರೆ ಇಲ್ಲಿನ ಫ್ಯಾಂಟಸಿಯು ನೆಲದ ಬದುಕಿಗೆ ವಿದಾಯ ಹೇಳುವ 'ಸಾಹಿತ್ಯಕ ಉಪಕರಣ'ವಾಗದೆ ಬಾಳನ್ನು ಪೋಷಿಸುತ್ತದೆ. ನಾಕಾಲಯ್ಯ, ಜಾಲಗಿರಿಯಜ್ಜ, ಸುದೇಹಿ ಮುಂತಾದವರ ಬದುಕು ಮತ್ತು ವರ್ತನೆಗಳ 'ಅನ್ ಪ್ರೆಡಿಕ್ಟಬಲ್' ಆದ ಗುಣವು ಕತೆಗಳಿಗೆ 'ಮಾಯಕ'ದ ಗುಣವನ್ನು ಕೊಡುತ್ತವೆ. ಈ ಕತೆಗಳಲ್ಲಿ ನಿಟ್ಟುಸಿರು ಬಿಡುತ್ತಿರುವ ಪ್ರಾಣಿಲೋಕ, ಸಸ್ಯಲೋಕ ಮತ್ತು ಮನುಷ್ಯಲೋಕಗಳು ಬೇರೆ ಬೇರೆಯೆನಿಸದ 'ಒಂದುತನ'ದ ಸ್ಥಿತಿಯಿಂದ 'ಕೊಂದುತನ'ದ ಸ್ಥಿತಿಗೆ ತಲುಪಿವೆ. ನವಿಲು, ಹುಲ್ಲೆ, ಹಕ್ಕಿ, ಹಸುಗಳ ಆಕ್ರಂದನವು ತಮ್ಮ ಮೂಕತನದಿಂದಲೇ ಮನುಷ್ಯರ ಮಾತುಗಳಿಗಿಂತ ಶಕ್ತಿಶಾಲಿಯಾಗುತ್ತವೆ. ಆದ್ದರಿಂದಲೇ ಗ್ಯಾರಜ್ಜ, ಸಣ್ಣಾಲಜ್ಜಿ, ಟೀನ, ಬಿಲ್ಲೂರ ಮುಂತಾದವರ ಆಂಗಿಕಗಳು ಮಾತುಗಳಿಗಿಂತ ಪರಿಣಾಮಕಾರಿಯಾಗಿವೆ. ಚಿಗುರೆಗಂಗಳ ಚೆಲುವೆಯಾದ ಭೂಮಿತಾಯಿಯ 'ಒಡವ್ಯಲ್ಲೊ ಮಗನೆ, ಉಸಿರಿದ್ದ ಒಡಲು' ಎಂಬ ಹಲುಬುವಿಕೆಯು ಈ ಕತೆಗಳಲ್ಲಿ ಮಡುಗಟ್ಟಿದೆ. ದಿಟವಾದ ಅನುಭವ ಮತ್ತು ವಿವರಗಳನ್ನು ಕೆಡಿಸಿಬಿಡುವ 'ಪ್ರಮಾಣ ಭಾಷೆ'ಯ ಸೆರೆಮನೆಯಿಂದ ಈ ಕತೆಗಳು ಹೊರಬಂದಿವೆ. ತಿಪಟೂರು ಸೀಮೆಯ ಹಳ್ಳಿಗಳ ಪದಕೋಶ, ವಾಕ್ಯರಚನೆ ಮತ್ತು ನುಡಿಗಟ್ಟುಗಳನ್ನು ಬಳಸದೆ ಇದ್ದರೆ ಈ ಕತೆಗಳು ಶಕ್ತಿಹೀನವಾಗುತ್ತಿದ್ದವು. ಆದರೆ ಆಡುಭಾಷೆಯಷ್ಟೇ ಕತೆಯ/ಕಲೆಯ ಭಾಷೆಯಾಗಿಬಿಡುವುದಿಲ್ಲ. ಅದರ ನೆಲೆಗಟ್ಟಿನ ಮೇಲೆ ಗಂಗಾಧರಯ್ಯನವರ ಸ್ವಂತಶೈಲಿ ರೂಪುಗೊಳ್ಳುತ್ತದೆ. ಅವರದು ಐಂದ್ರಿಯಿಕ ಅನುಭವ, ಭಾವನೆ ಮತ್ತು ಆಲೋಚನೆಗಳಿಗೆ ಸರಿ ಹೊಂದುವ ಭಾಷಿಕ ಬಗೆಗಳನ್ನು ಎಚ್ಚರದಿಂದ ರೂಪಿಸುವ, ಜೋಡಿಸುವ ವಿಧಾನ. ಅಂಥ ನಿರೂಪಣೆಯಲ್ಲಿ ಆಡುಮಾತಿಗಿಂತ ಭಿನ್ನವಾದ ನುಡಿಗೂ ಅದರದೇ ಆದ ಕೆಲಸಗಳಿರುತ್ತವೆ. ಪುಟ್ಟ ಪುಟ್ಟ ವಾಕ್ಯಗಳಿಗಿಂತ ಹೆಚ್ಚಾಗಿ ದೀರ್ಘವಾದ, ಅದರಿಂದಲೇ ಸಂಕೀರ್ಣವಾಗುವ ವಾಕ್ಯಗಳಿಗೆ ಗಂಗಾಧರಯ್ಯ ಎಡೆ ಮಾಡಿಕೊಡುತ್ತಾರೆ. ಹಲವು ಸಮುದಾಯಗಳಿಂದ ಬಂದ, ವಿದ್ಯೆಯ ಫಲವಾಗಿ ಪರಿಷ್ಕಾರಗೊಳ್ಳುತ್ತಿರುವ ಭಾಷೆಯ ಬಗೆಗಳೂ ಇವರಿಗೆ ಗೊತ್ತಿವೆ. ಅಚ್ಚಕನ್ನಡದ ಪ್ರಾದೇಶಿಕ ಪದಗಳ ಬಳಕೆಯಿಂದ ವಸ್ತುಲೋಕ, ಸಮುದಾಯ ಹಾಗೂ ಕನ್ನಡಿಗರು ತಮ್ಮ ನೋವನ್ನು ತಾವೇ ವಿವರಿಸಿಕೊಳ್ಳುವ ಬಗೆಗಳೂ ಇಲ್ಲಿ ಕಿವಿಯೆದುರು ಬರುತ್ತವೆ.

ಯಾವುದೇ ಬರವಣಿಗೆಯು 'ಸಂತೋಷ' ಕೊಡುವುದಿಲ್ಲ. ಹಾಗೆಂದು ಅದು ನಮ್ಮನ್ನು ದುಃಖದಲ್ಲಿ ಮುಳುಗಿಸುವುದೂ ಇಲ್ಲ. ಕತೆ–ಕವಿತೆಗಳು ಮೂಡಿಸುವ ಅನು–ಕಂಪದ ಪರಿ ಬೇರೆಯದೇ ಹೌದು. ಈ ಸಂಕಲನದ ಜೊತೆಗಿರುವ ಮುನ್ನುಡಿ–ಬೆನ್ನುಡಿಗಳು ಇಂತಹ ಕತೆಗಳನ್ನು ಕಾಣಬೇಕಾದ ಬಗೆಗಳನ್ನು ಸಮರ್ಥವಾಗಿ, ವಿಭಿನ್ನವಾಗಿ ತಿಳಿಸಿ ಕೊಡುತ್ತವೆ.

ಇನ್ನಷ್ಟು ಮತ್ತಷ್ಟು ಹೇಳಬಹುದು. ಸದ್ಯಕ್ಕೆ ಇಷ್ಟು ಸಾಕು. ●